**ಅತೀ ಜರೂರು**

**ಕರ್ನಾಟಕ ಸರ್ಕಾರ**

ಸಂ.ಡಿಟಿಇ/09/ಎಸ್‌ಸಿಹೆಚ್(1)/2019-20

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ: 30-12-2019.

-:: **ಸುತ್ತೋಲೆ** ::-

**ವಿಷಯ :** **2019-20ನೇ** ಸಾಲಿನಲ್ಲಿ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ & ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕಗಳ ವಿವರಗಳು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ವಿದ್ಯಾರ್ಥಿವೇತನಕ್ಕೆ ನಿರ್ವಹಿಸುತ್ತಿರುವ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸುವ ಬಗ್ಗೆ.

-0000000-

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಅನ್‌ಲೈನ್ ಮುಖಾಂತರ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು, ಇ-ಆಡಳಿತ ಇಲಾಖಾವತಿಯಿಂದ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ **(State Scholarship Portal for Post Matric)**ವನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಅದರಂತೆ 2019-20ನೇ ಸಾಲಿನಲ್ಲಿ ಸರ್ಕಾರಿ/ಅನುದಾನಿತ/ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ಪಾಲಿಟೆಕ್ನಿಕ್‌ಗಳಲ್ಲಿ ಪಾವತಿಸಿರುವ ವಿವಿಧ ಶುಲ್ಕಗಳ ವಿವರಗಳು ಅಗತ್ಯವಿರುತ್ತದೆ. ಆದ್ದರಿಂದ ತಮ್ಮ ಪಾಲಿಟೆಕ್ನಿಕ್ ಸಂಸ್ಥೆಗೆ ಪ್ರವೇಶ ಪ್ರಕ್ರಿಯೆಗೆ ನೀಡಿರುವ User Id ಯನ್ನು ಉಪಯೋಗಿಸಿ, http://dtetech.karnataka.gov.in/kartechnical/login/Login.aspx ರಲ್ಲಿ Login ಮಾಡಿ ತಂತ್ರಾಂಶದಲ್ಲಿ ಕೇಳಿರುವ ಮಾಹಿತಿಗಳನ್ನು ದಿನಾಂಕ: 31-12-2019ರ ರೊಳಗಾಗಿ ಕಡ್ಡಾಯವಾಗಿ ಭರ್ತಿಮಾಡುವುದು.**

ಮುಂದುವರೆದು **"ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ"** ಮುಖಾಂತರ ಅರ್ಜಿ ಸಲ್ಲಿಸಿರುವ ಅರ್ಹ ವಿದ್ಯಾರ್ಥಿಗಳು ಸಂಸ್ಥೆಗಳಿಗೆ ಪಾವತಿಸಬೇಕಾದ ಶುಲ್ಕಗಳನ್ನು ನೇರವಾಗಿ ಸಂಸ್ಥೆಯ ವಿದ್ಯಾರ್ಥಿವೇತನ ಖಾತೆಗೆ ಜಮೆ ಮಾಡುವ ವ್ಯವಸ್ಥೆಯನ್ನು ಕೈಗೊಳ್ಳಬೇಕಾಗಿರುವುದರಿಂದ ಪಾಲಿಟೆಕ್ನಿಕ್‌ಗಳಲ್ಲಿ ವಿದ್ಯಾರ್ಥಿವೇತನಕ್ಕೆ ನಿರ್ವಹಿಸುತ್ತಿರುವ ಬ್ಯಾಂಕ್ ಖಾತೆ ವಿವರಗಳನ್ನು ಈ ಕೆಳಗೆ ತಿಳಿಸಿರುವ **Google Form I.D** ಯಲ್ಲಿ ಭರ್ತಿ ಮಾಡಿ, ಮಾಹಿತಿಯನ್ನು E-Mail id: dteschsection@gmail.com ಗೆ **ದಿನಾಂಕ: 31-12-2019ರ** ಒಳಗೆ ಕಡ್ಡಾಯವಾಗಿ ಕಳುಹಿಸಲು ತಿಳಿಸಿದೆ.

**Google Form Id:** Link to enter Details

ಸಂಸ್ಥೆಗಳಿಗೆ ಕೇಳಿರುವ ಮಾಹಿತಿಗಳನ್ನು ಸಲ್ಲಿಸದೇ ಇದ್ದಲ್ಲಿ ಆಯಾ ಸಂಸ್ಥೆಯ ಪ್ರಾಂಶುಪಾಲರೇ ನೇರವಾಗಿ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಿದೆ. ಹೆಚ್ಚಿನ ಮಾಹಿತಿಗಾಗಿ ನಿರ್ದೇಶನಾಲಯದ ಸಹಾಯವಾಣಿ ಸಂಖ್ಯೆ: 9731405503, 9448039877, 9741884442, 9986919263 ಗೆ ಸಂಪರ್ಕಿಸಬಹುದಾಗಿದೆ.

**ಕರಡು ನಿರ್ದೇಶಕರಿಂದ ಅನುಮೋದಿಸಿದೆ**

**ನಿರ್ದೇಶಕರು**

**ಇವರಿಗೆ,**

1. **ಪ್ರಾಂಶುಪಾಲರು,** ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್‌ಗಳು - ಇವರ ಗಮನಕ್ಕಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. **ಸಂಯೋಜನಾಧಿಕಾರಿಯವರು,** ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. (ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸುವುದು)
3.